ಉಪಾಹಾರ ಸ್ವೀಕರಿಸುತ್ತಿದ್ದರು. ಅಂತಹ ಖದರಿದ್ದ ಮೇಜದು. ಆ ಮೇಜಿನ ಮೇಲೆ ಕೈಯಿಟ್ಟರೆ ಸಾಕು. ಕಥಾ ಖಣಜವನ್ನೇ ಬಿಚ್ಚಿ ಇಡುತ್ತಿತ್ತು. ಆ ಕಥೆಗಾರ್ತಿ ಮೇಜಿಗೆ ಒರಗಿಕೊಂಡು ನಿಂತಿದ್ದು ನಿಜ. ಅವಳ ಮನಸ್ಸು ಮುಂದೆ ಬರೆಯಬೇಕಿದ್ದ ಕಥೆಯ ಬಗ್ಗೆಯೇ ಚಿಂತಿಸುತ್ತಿತ್ತು. ಹಾಗೆ ಯೋಚಿಸುತ್ತಾ ಅದರ ಮೇಲೆ ತನ್ನ ಕೈಯಿಟ್ಟಳು. ಮೇಜು ಪುಳಕಗೊಂಡು ಸಂತಸದಿಂದ ನಕ್ಕು ನಲಿದಾಡಿತು. ಆಕೆಗೆ ತುಂಬು ಹೃದಯದ ಸ್ವಾಗತವನ್ನು ಕೋರಿ 'ಒಂದು ಕಥೆ ಹೇಳಲೇ?' ಎಂದಿತು. ಕಥೆಗಾರ್ತಿಗಂತೂ ಇದು ನಿಜವೇ? ಎಂದು ತನಗೆ ತಾನೇ ಪ್ರಶ್ನಿಸಿಕೊಂಡು ಚಿವುಟಿಕೊಂಡಳು. ಆ ಮೇಜಿನ ಸೆಳೆತಕ್ಕೆ ಒಳಗಾದಳು. ಅದರ ತೆರೆದ ಬಾಹುಗಳಲ್ಲಿ ಬಂಧಿಯಾದಳು. ಕಣ್ಮುಚ್ಚಿದಳು ಅಷ್ಟೇ. ಮೇಜು ಕಥೆ ಬಿತ್ತರಿಸುತ್ತಾ ಹೋಯಿತು.

'ಎಲ್ಲಿಂದ ಪ್ರಾಂಭಿಸಲಿ? ಆ ಮುದ್ದಾದ ಹುಡುಗಿಯ ಕಥೆಯಿಂದ ಪ್ರಾರಂಭಿಸುತ್ತೇನೆ ಎಂದಿತು ಮೇಜು. 'ಆ ಹುಡುಗಿ ಬಹಳ ತಿಂಗಳ ನಂತರ ಬಂದಳು. ತುಂಬಾ ಸೊರಗಿದ್ದಾಳೆನಿಸಿತು. ಕಳೆದ ಆರು ತಿಂಗಳಿಂದಲೂ ತನ್ನ ಪ್ರಿಯಕರನ ಜೊತೆ ಬರುತ್ತಿದ್ದಳು. ಒಂದು ದೋಸೆ, ಒಂದು ಕಾಫಿ ಇಬ್ಬರೂ ಬೈಟು. ಒಬ್ಬರಿಗೊಬ್ಬರು ತಿನಿಸುವುದೇನು? ನಗುವುದೇನು? ಈ ದಿನ ಅವಳ ಎದುರಲ್ಲಿ ಕುರ್ಚಿ ಖಾಲಿ. ಅವನಿಲ್ಲ. ಮೇಜಿಗೆ ಪಿಚ್ಚೆನಿಸಿತು. ಅದರ ಮೇಲೆ ಇವರ ಎಷ್ಟು ಪ್ರೀತಿಯಾಟಗಳು ನಡೆದಿರಲಿಲ್ಲ? ಇಷ್ಟು ಬೇಗ ಎಲ್ಲವೂ ಮುಗಿಯಿತೇ? ನಮ್ಮ ಮಾಣಿಗಳು ಅವಳ ಮೇಜಿನ ಹಿಂದೆಮುಂದೆ ಸುತ್ತುತ್ತಿದ್ದರು. ಅವನು ಬಂದ ತಕ್ಷಣ 'ಒಂದು ಮಸಾಲೆ ದೋಸೆ' ಹೇಳುತ್ತಾನೆ ಎಂದು ತಯಾರಾಗಿದ್ದರು. ಆ ಮೇಜಿಗೆ ಬಹಳ ಖುಷಿಯಾಯಿತು. ಸದ್ಯ ಬಂದನಲ್ಲ. ಇನ್ನು ಮಾಣಿ ದೋಸೆ ತರುತ್ತಾನೆ ಹುಡುಗಿ ದುಃಖ ಮರೆತು ನಗುತ್ತಾಳೆ. ಹುಡುಗ ದೋಸೆಯ ಚೂರನ್ನು ಅವಳ ಬಾಯಿಗಿಡುತ್ತಾನೆ, ಅವಳು ಸಂಕೋಚದಿಂದ ತಿನ್ನುತ್ತಾಳೆ. ಅವನು ಬಂದ. ಆದರೆ, ಅವನ ಜೊತೆ ನಾಲ್ಕೈದು ಪಡ್ಡೆ ಹುಡುಗರೂ ಬಂದರು. ಅವನ ಪಕ್ಕದಲ್ಲಿ ಮತ್ತೊಬ್ಬ ಕುಳಿತ. ಈ ಮೇಜಿನ ಅವಳ ಮುಂದೆ ಕುಳಿತರು. ಇನ್ನಿಬ್ಬರು ಪಕ್ಕದ ಮೇಜಿನಲ್ಲಿ ಕುಳಿತರು. ಅವರು ಮಾತನಾಡುತ್ತಿದ್ದ ಭಾಷೆ ಮೇಜಿಗೆ ಅರ್ಥವಾಗಲಿಲ್ಲ. ಅವನು ಒರಟೊರಟಾಗಿ ಅವಳ ಗಲ್ಲ ಹಿಡಿದು ತಲೆ ಮೇಲೆತ್ತಿದ. ಎದೆ ಮುಂದೆ ಮಾಡಿ ಕೂಡುವಂತೆ ಬೆನ್ನಿಗೆ ಒಂದು ಗುದ್ದಿದ. ಅವಳು ಹಾಂ. ಎಂದು ಸಣ್ಣಗೆ ಚೀರಿ ಎದೆ ಮುಂದೆ ಮಾಡಿಕೊಂಡು ಕುಳಿತಳು. ತಾನೇ ಸೆರಗನ್ನು ಪಕ್ಕಕ್ಕೆ ಸರಿಸಿದ. ಮೊದಲಿನ ಪ್ರೀತಿಯಾಗಲೀ, ಪ್ರೇಮವಾಗಲೀ ಅವನಲ್ಲಿ ಕಾಣಲಿಲ್ಲ. ಹಸುವಿನ ಮಾರಾಟದಂತೆ ಕಂಡಿತು. ಪಕ್ಕದವನು ಸರಿ ಎಂದ. ಜೇಬಿನಿಂದ ದುಡ್ಡು ತೆಗೆದು ಮೇಜಿನ ಮೇಲಿಟ್ಟ. ಆ 'ಅವನು' ದುಡ್ಡು ಜೇಬಿಗೆ ಇಳಿಬಿಟ್ಟು, ಅವಳನ್ನು ಆ ಹೊಸಬನ ಹಿಂದೆ ಹೋಗುವಂತೆ ಹೇಳಿದ. ಅವಳು ಅವನ ಮುಖ ನೋಡಿದಳು. ಅವನು ಕಣ್ಣು ಅಗಲವಾಗಿ ಬಿಟ್ಟ ತಕ್ಷಣ ಅವಳು ಹೆದರಿ ಅವನ ಹಿಂದೆ ಹೊರಟಳು. ಕ್ಷಣಾರ್ಧದಲ್ಲಿ ಅವಳ ಮಾರಾಟವಾಗಿ ಹೋಗಿತ್ತು. ನಾನು ಇದಕ್ಕೆ ಮೂಕಸಾಕ್ಷಿಯಾದೆ. 'ಛೇ!, ಇದಕ್ಕಾಗಿ ಇವಳನ್ನು ಪ್ರೀತಿಸುವ ನಾಟಕವಾಡಿದನಾ? ದಗಾಕೋರ. ಪ್ರೀತಿಸಿದವಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆ ತಲೆಹಿಡುಕ. ಈ ದಂಧೆಗೆ ಇವಳನ್ನು ತಳ್ಳಲು ಇಷ್ಟು ದಿನ ಪ್ರೀತಿಸುವ ನಾಟಕವಾಡಿದ್ದಾನೆ ಎಂತಹ ಮೋಸ!' ಮೇಜಿಗೆ ಬಾಯಿಲ್ಲ, ಆದರೂ ರೋದಿಸಿತು.

ಅವಳನ್ನು ಮರೆಯುವ ಮುನ್ನವೇ ಆ ಇಳಿ ವಯಸ್ಸಿನ ದಂಪತಿಗಳು ಬಂದರು. ಯಜಮಾನರು ಬಹಳ ಪ್ರೀತಿಯಿಂದ ಕುರ್ಚಿಯನ್ನು ಹಿಂದಕ್ಕೆಳೆದು ಹೆಂಡತಿಯನ್ನು ಕುಳಿತುಕೊಳ್ಳುವಂತೆ ಕೈಯಲ್ಲಿ ತೋರುತ್ತಾರೆ. ಹೆಂಡತಿ ಠೀವಿಯಿಂದ ಕುರ್ಚಿಯಲ್ಲಿ ಕುಳಿತು ತನ್ನ ಜಂಭದ ಚೀಲವನ್ನು ಮೇಜಿನ ಮೇಲಿಡುತ್ತಾರೆ. ಈ ಜೋಡಿ ಕಳೆದ ನಾಲ್ಕೈದು ವರ್ಷದಿಂದಲೂ ತಪ್ಪದೇ ಬರುತ್ತಿದೆ. ಎಪ್ಪತ್ತರ ಆಸುಪಾಸಿರಬೇಕು. ಈ ಮೇಜು ಖಾಲಿ ಇಲ್ಲಾ ಎಂದರೆ ಖಾಲಿಯಾಗುವವರೆಗೂ ಕಾಯುವರು. ಹೆಂಡತಿ ಸದಾ ಮಸಾಲೆ ದೋಸೆ. ಗಂಡ ಖಾಲಿ ದೋಸೆ. ರುಚಿಗೆಂದು ಪರಸ್ಪರ ತಮ್ಮ ದೋಸೆಗಳನ್ನು ಒಬ್ಬರು ಇನ್ನೊಬ್ಬರ ಮುಂದಿಡುತ್ತಾರೆ. ಈ ವಯಸ್ಸಿನಲ್ಲೂ ಅದೆಷ್ಟು ರಸಿಕರು. ಇವರು ಬಂದರೆ ಮೇಜಿಗೆ ಬಹಳ ಖುಷಿ. ಆದರೆ ಎಂದಿನಂತೆ ಗಂಡ, ಹೆಂಡತಿಗಾಗಿ